# ಸಿಟ್ಟು ಮಾಡಿದರುಂಟೆ ಶ್ರೀ ಕೃಷ್ಣನಲ್ಲಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 560.
2. **Note:** This song is not available in other standard books that I am referring.
3. **Note:** Singer has followed these lyrics.

ರಾಗ: ಕಾಂಭೋಜ ತಾಳ: ಝಂಪೆ

ಸಿಟ್ಟು ಮಾಡಿದರುಂಟೆ ಶ್ರೀ ಕೃಷ್ಣನಲ್ಲಿ || ಪ ||
ಕೊಟ್ಟು ಹುಟ್ಟದೆ ಮುನ್ನ ಈ ಸೃಷ್ಟಿಯಲ್ಲಿ || ಅಪ ||

ನೆಲವ ತೋಡಿದರಿಲ್ಲ ಛಲದಿ ಹೋರಿದರಿಲ್ಲ
ಕುಲಗೆಟ್ಟರಿಲ್ಲ ಕುಪ್ಪರಿಸಿದರು ಇಲ್ಲ
ಬಲವ ತೋರಿದರಿಲ್ಲ ಕೆಲಕೆ ಸಾರಿದರಿಲ್ಲ
ತಲೆಯ ಕಲ್ಲಿಗೆ ಹಾಯ್ದು ಒಡಕೊಂಡರಿಲ್ಲ || 1 ||

ಧರಣಿಯಾಳುವ ದೊರೆಯ ಓಲೈಸಿದರು ಇಲ್ಲ
ಉರಗನ ಬಿಲದೊಳಗೆ ಹೋದರು ಇಲ್ಲ
ಗಿರಿಗಹ್ವರಂಗಳಲಿ ತೊಳಲಿ ಬಳಲಿದರಿಲ್ಲ
ಬರಿದೆ ಹಲವರಿಗೆ ಬಾಯ್ದೆರೆದರಿಲ್ಲ || 2 ||

ದೊಂಬಲಾಗವ ಹಾಕಿ ಡಿಂಬ (ದಿಂಡು) ತಿರುಗಿದರಿಲ್ಲ
ತುಂಬಿರುವ ಊರೊಳಗೆ ತಿರಿತಿಂದರಿಲ್ಲ
ಅಂಬುಜಾಕ್ಷ ಪುರಂದರ ವಿಠಲನ್ನ
ಪಾದಾಂಬುಜವ ನೆನೆ-ನೆನೆದು ಸುಖಿಯಾಗು ಮನವೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಗಹ್ವರ** = ಆಳವಾದ, ಅಗಾಧವಾದ, ಅರಣ್ಯ, ಗುಹೆ, ಅಂಧಕಾರ,

**ಡಿಂಬ** = ಗರ್ಭದಲ್ಲಿರುವ ಶಿಶು, ಕೋಲಾಹಲ, ವಿಪ್ಪತ್ತು, ಸಂಕಟ,

**ದಿಂಡು** = ಮರದ ತುಂಡು, ಬಂಡೆಗಲ್ಲು, ಕಟ್ಟಿಗೆಗಳ ರಾಶಿ, ಗರ್ವ,

**ದಿಂಡು ತರಿಸು** = ಶಕ್ತಿಗುಂದಿಸು, ಹೆಮ್ಮೆಯನ್ನು ತಗ್ಗಿಸು

**Classification:** Keerthane
**Ankita:** purandara vittala
**Location:** NA
**Category:** Jeevanoddhara
**Sub-Category:** Krishna, sittu, huttu, kula, bhumi, arasa, uraga, parvata, bayi, garva, ooru, sukha, mana,
**Pravachana:** NA
**Explanation:** NA